**ಸಾಕ್ಷಿಯನ್ನು ದಿ 10.01.2024 ರ ಮಧ್ಯಂತರ ಆದೇಶದ ಮೇರೆಗೆ ಪುನಃ ಕರೆಯಿಸಿ , ದಿ 15.02.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ಆರ್ ವಕೀಲರಿಂದಃ**

1. ಈ ಪ್ರಕರಣ ದಾಖಲು ಆಗುವ ಕಾಲಕ್ಕೆ 6 ನೇ ಅರೋಪಿ ನಂ .17 , 4 ನೆ ಮುಖ್ಯ ರಸ್ತೆ , ಪಟ್ಟಾಭಿರಾಮನಗರ ಇಲ್ಲಿ ವಾಸವಾಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಜಯನಗರ 4 ನೇ ಬ್ಲಾಕ್ ಬೈರ ಸಂದ್ರ ದಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ . 6 ನೇ ಅರೋಪಿ ಜಯನಗರ 4 ನೇ ಬ್ಲಾಕ್ ಬೈರ ಸಂದ್ರ ದಲ್ಲಿ ವಾಸವಾಗಿರುವ ಬಗ್ಗೆ ನಾನು ತನಿಖಾಧಿಕಾರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ . 6 ನೇ ಅರೋಪಿ ಜಯನಗರ 4 ನೇ ಬ್ಲಾಕ್ ಬೈರ ಸಂದ್ರ ದಲ್ಲಿ ಎಂದಿಗೂ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲು ಆಗುವ ಕಾಲಕ್ಕೆ 7 ನೇ ಅರೋಪಿ ನಂ .65 , ಎ ಕೆ ಕಾಲೋನಿ, ಯಡಿಯೂರು , ಜಯನಗರ ಇಲ್ಲಿ ವಾಸವಾಗಿರುತ್ತಾರೆಂದರೆ ಸರಿಯಲ್ಲ. 7 ನೇ ಅರೋಪಿ ನಂ .65 , ಎ ಕೆ ಕಾಲೋನಿ, ಯಡಿಯೂರು , ಜಯನಗರ ಇಲ್ಲಿ ಎಂದಿಗೂ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು 1 ರಿಂದ 3 ನೇ ಅರೋಪಿತರ ವಿರುದ್ದ ಕೌಟುಂಬಿಕ ದೌರ್ಜನ್ಯ ಕಾಯಿದೆ ಅಡಿಯಲ್ಲಿ ಬೆಂಗಳೂರಿನ ಎಂ ಎಂ ಟಿ ಸಿ ನ್ಯಾಯಾಲಯದಲ್ಲಿ 1 ರಿಂದ 3 ನೇ ಅರೋಪಿತರ ವಿರುದ್ದ ಸಿ ಮಿಸ್ ನಂ. 149/14 ರಲ್ಲಿ ಪ್ರಕರಣದ ದಾಖಲಿಸಿದ್ದು , ಅದರಲ್ಲಿ ವಿಚಾರಣೆ ಅಗಿ ದಿ 07.04.2022 ರಂದು ಅದು ವಜಾ ಗೊಂಡಿದೆ ಎಂದರೆ ಸರಿ. **ಸದರಿ ಪ್ರಕರಣದ ತೀರ್ಪಿನ ಧೃಡಿಕೃತ ಪ್ರತಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಯಿತು.**

**2.** 1 ನೇ ಅರೊಪಿತ ನನ್ನ ವಿರುದ್ದ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಎಂ ಸಿ ನಂ. 3678/14 ರಲ್ಲಿ ವಿವಾಹ ವಿಚ್ಚೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ನಾನು ಸಹ ಎಂ .ಸಿ ನಂ. 4034/14 ರಲ್ಲಿ ಗಂಡ ಬೇಕು ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಆ ಎರಡೂ ಪ್ರಕರಣದಲ್ಲಿ ಒಟ್ಟಾಗಿ ವಿಚಾರಣೆ ನಡೆದು ಅದರಲ್ಲಿ ದಿ 27.11.2021 ರಂದು ತೀರ್ಪು ಆಗಿದೆ ಎಂದರೆ ಸರಿ. ಅ ಪ್ರಕಾರ 1 ನೇ ಅರೋಪಿ ಸಲ್ಲಿಸಿದ್ದ ಅರ್ಜಿ ಪುರಸ್ಕೃತ ಗೊಂಡು ವಿವಾಹ ವಿಚ್ಚೇದನ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ತಾನು ಆದೇಶದ ವಿರುದ್ದ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲಿ ಎಂ ಎಫ್ ಎ ನಂ. 832/22 ರಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ . ನಾನು ಸಲ್ಲಿಸಿದ್ದ ಎಂ ಸಿ ನಂ. 4034/2014 ಪ್ರಕರಣ ವಜಾ ಗೊಂಡಿದೆ ಎಂದರೆ ಸರಿ. **ಸದರಿ ಪ್ರಕರಣದ ತೀರ್ಪಿನ ಧೃಡಿಕೃತ ಪ್ರತಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.**

3. ನಿಪಿ-1 ರಲ್ಲಿ ಹೇಳಿರುವ ಅಂಶಗಳನ್ನೆ ನಾನು ಎಂ ಎಂ ಟಿ ಸಿ ನ್ಯಾಯಾಲಯದಲ್ಲಿ ಮತ್ತು ಕೌಟುಂಬಿಕ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿಗಳಲ್ಲಿ ತಿಳಿಸಿರುತ್ತೆನೆಂದರೆ ಸಾಕ್ಷಿ ಕೆಲವು ಅಂಶಗಳನ್ನು ಮಾತ್ರ ತಿಳಿಸಿರುತ್ತೆನೆಂದು ನುಡಿಯುತ್ತಾರೆ . ಆ ಎರಡೂ ಪ್ರಕರಣಗಳ ಅರ್ಜಿಗಳಲ್ಲಿ ಇದೇ ಪ್ರಕರಣದ ನಿಪಿ-1 ರಲ್ಲಿ ಹೆಳಿರುವಂತಹ ಅಂಶಗಳನ್ನೇ ತಿಳಿಸಿರುತ್ತನೆಂದರೆ ಸರಿಯಲ್ಲ . ನಾನು ಪೋಲಿಸರಿಗೆ ನೀಡಿದ ಮರು ಹೇಳಿಕೆಯಲ್ಲಿ ಆರೊಪಿತರು ನನಗೆ ಕೈ ಇಂದ ಕಪಾಳಕ್ಕೆ ಹೊಡೆದರು ಎಂದು ಹೇಳಿದ್ದು ನಾನು ಆ ಬಗ್ಗೆ

ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ . ಆ ಬಗ್ಗೆ ತನಿಖಾಧಿಕಾರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ . ಆರೋಪಿತರು ನನಗೆ ಕೈಯಿಂದ ಕಪಾಳಕ್ಕೆ ಹೊಡೆದಿಲ್ಲ ಮತ್ತು ನಾನು ಯಾವುದೇ ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ನನ್ನ ತಂದೆ 1 ನೇ ಆರೋಪಿಗೆ ಮತ್ತು ನನಗೆ ಮನೆ ಮಾಡಿಕೊಡುವ ಸಲುವಾಗಿ 2 ಲಕ್ಷ ಹಣ ಸಾಲ ಮಾಡಿ ಕೊಟ್ಟ ಬಗ್ಗೆ ಯಾರಿಂದ ಸಾಲ ಮಾಡಿದ್ದರು ಎಂದು ತನಿಖಾಧಿಕಾರಿಗೆ ತಿಳಿಸಿದೆ ಆದರೆ ದಾಖಲೆ ಕೊಟ್ಟಿಲ್ಲ.

4. ನಿಪಿ-1 ರಲ್ಲಿ ಹೆಳಿರುವಂತೆ ಆರೊಪಿತರಿಗೆ ಯಾವುದೇ ಚಿನ್ನಾಭರಣಗಳನು ವರದಕ್ಷಿಣೆಯಾಗಿ ಕೊಟ್ಟಿಲ್ಲ ಮತ್ತು ಆ ಚಿನ್ನಾಭರಣಗಳನ್ನು ಖರೀದಿ ಮಾಡಿದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿತನನ್ನು ಮದುವೆ ಆದ 8 ತಿಂಗಳ ನಂತರ ಜಯನಗರದ ಮನೆಯಲ್ಲಿ ನಾನು ಮತ್ತು 1 ನೇ ಆರೋಪಿ ಸುಮಾರು 2 ತಿಂಗಳು ಮಾತ್ರ ವಾಸವಾಗಿದ್ದೆವು . ಸಾಕ್ಷಿ ಮುಂದುವರಿದು ಆ ಮೊದಲು 8 ತಿಂಗಳ ಕಾಲ ನಾನು ಮತ್ತು ಎಲ್ಲಾ ಆರೊಪಿತರು ಅದರಲ್ಲಿ ರವಿ ಕುಮಾರ್ ಮತ್ತು ಪ್ರಭಾವತಿ ಅವರನ್ನು ಹೊರತುಪಡಿಸಿ ಗುರುಪ್ಪನಪಾಳ್ಯದಲ್ಲಿ ವಾಸಗಿದ್ದೆವು ಎಂದು ನುಡಿಯುತ್ತಾರೆ . ಮುಂದವರಿದು ರವಿಕುಮಾರ್ ಮತ್ತು ಪ್ರಭಾವತಿ ಆರೊಪಿತರು ಗುರಪ್ಪನ ಪಾಳ್ಯದ ನಮ್ಮ ಮನೆಯ ಮುಂದೆ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಗುರಪ್ಪನ ಪಾಳ್ಯದಲ್ಲಿ ನಾನು ಮತ್ತು 1 ನೇ ಆರೊಪಿತ ಮಾತ್ರ ವಾಸವಾಗಿದ್ದೆವು ಎಂದರೆ ಸರಿಯಲ್ಲ. ಮದುವೆ ಆದ ನಂತರ ಗುರಪ್ಪನ ಪಾಳ್ಯದಲ್ಲಿ ನಾನು ಮತ್ತು 1 ರಿಂದ 3 ನೇ ಆರೊಪಿತರು ಮಾತ್ರ ವಾಸವಾಗಿದ್ದು ಬೇರೆ ಯಾವುದೇ ಅರೋಪಿತರು ನಮ್ಮ ಜೊತೆ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು ನನ್ನ ಮರುಹೇಳಿಕೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಆರೋಪಿತರು ನನಗೆ ಕೈ ಇಂದ ಹೊಡೆದ ಸಮಯವನ್ನು ನಮೂದಿಸಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೆ ಇದ್ದ ರು ಸಹ ಅವರ ವಿರುದ್ದ ಸುಳ್ಳು ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)**

**ಓ.ಹೇ. ಕೇ. ಸ. ಇ. ಒ**

**37 ನೇ ಅ.ಮು. ಮ. ದಂ. ನ್ಯಾ.**